**SET – 4**

**Series : TYM/C**

**Code No. 13**

रोल नं.
**Roll No.** | | | | | | | |

Candidates must write the Code on the title page of the answer-book.

- Please check that this question paper contains **11** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **9** questions.
- **Please write down the Serial Number of the question before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.
- ಈ ಪ್ರಶ್ನೆಪತ್ರಿಕೆಯಲ್ಲಿ **11** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರಪತ್ರಿಕೆಯ ಮುಖಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆಪತ್ರಿಕೆಯಲ್ಲಿ **9** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮಸಂಖ್ಯೆಯನ್ನು ಬರೆಯಿರಿ.
- ಈ ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು **15** ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆಪತ್ರಿಕೆಯನ್ನು **10.15 a.m.** ಗೆ ವಿತರಿಸಲಾಗುವುದು. **10.15 a.m.** ನಿಂದ **10.30 a.m.,** ವರೆಗೆ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರಪತ್ರಿಕೆಯಲ್ಲಿ ಬರೆಯಬಾರದು.

# ಕನ್ನಡ

# KANNADA

**ಅನುಮತಿಸಲಾದ ಸಮಯ : 3 ಗಂಟೆ** **ಗರಿಷ್ಠ ಅಂಕಗಳು : 80**

*Time allowed : 3 hours* *Maximum Marks : 80*

**ಸೂಚನೆಗಳು :** ಈ ಪ್ರಶ್ನೆ ಪತ್ರಿಕೆಯು **A, B, C** ಮತ್ತು **D** ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.

| | | |
|---|---|---|
| ವಿಭಾಗ – **A** (ವಾಚನ ಮತ್ತು ಗ್ರಹಿಕಾ ಕೌಶಲ) | : | **12** ಅಂಕಗಳು |
| ವಿಭಾಗ – **B** (ಬರವಣಿಗೆ ಕೌಶಲ) | : | **15** ಅಂಕಗಳು |
| ವಿಭಾಗ – **C** (ಅನ್ವಯಿಕ ವ್ಯಾಕರಣ) | : | **18** ಅಂಕಗಳು |
| ವಿಭಾಗ – **D** (ಪಠ್ಯಗಳ ಅಧ್ಯಯನ) | : | **35** ಅಂಕಗಳು |

## ವಿಭಾಗ – A

## (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

I. 1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.

ಒಬ್ಬರು ಇನ್ನೊಬ್ಬರ ಬಳಿ ಹೋಗಬೇಕಾಗಿ ಬರುವುದು ಸಮಾಜ ಜೀವನದ ಪ್ರಧಾನ ಲಕ್ಷಣ. ದೊಡ್ಡ ಬೇಡಿಕೆಯೊಂದಿಗೆ ಹೋಗಬಹುದು; ಚಿಕ್ಕ ಕೋರಿಕೆಯೊಂದಿಗೆ ಹೋಗಬಹುದು. ಸ್ವಾರ್ಥಕ್ಕಾಗಿ ಹೋಗಬಹುದು; ಕರ್ತವ್ಯ ನಿರ್ವಹಣೆಗಾಗಿ ಹೋಗಬಹುದು. ಅಂಗಡಿಗೆ ಗ್ರಾಹಕರು ಹೋಗುತ್ತಾರೆ; ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ; ಜನ ಅಧಿಕಾರಿಗಳ ಬಳಿ ಹೋಗುತ್ತಾರೆ. ಹೀಗೆ ಒಬ್ಬರು ಇನ್ನೊಬ್ಬರ ಬಳಿ ಹೋಗದೆ ಜೀವನ ಸಾಗುವುದಿಲ್ಲ. ಸಹಕಾರ ಬಾಳಿನ ಸೂತ್ರ; ಅವಲಂಬನೆ ದಿನದ ಬದುಕಿನ ವಿಧಿ. ಕಾರಣ ಯಾವುದೇ ಇರಲಿ, ಒಬ್ಬರು ಇನ್ನೊಬ್ಬರ ಬಳಿ ಬಂದಾಗ ಪರಸ್ಪರ ಅವರು ಹೇಗೆ ವರ್ತಿಸುತ್ತಾರೆ ಎನ್ನುವುದು ಸೌಜನ್ಯಕ್ಕೆ ಸಂಬಂಧಿಸಿದ್ದು. ಸೌಜನ್ಯ ಇಬ್ಬರ ನಡುವಿನ ಸಂಬಂಧವನ್ನು ಆಧರಿಸಿದ್ದು ಹಾಗೆಂದು ಕೊಟ್ಟು ತೆಗೆದುಕೊಳ್ಳುವಂಥದಲ್ಲ.

ಔಷಧ ಕೊಡುವುದಷ್ಟೇ ವೈದ್ಯರ ಕರ್ತವ್ಯವಿರಬಹುದು; ಪಾಠ ಹೇಳುವುದಷ್ಟೆ ಅಧ್ಯಾಪಕರ ಕರ್ತವ್ಯವಿರಬಹುದು; ನಿಯಮಾನುಸಾರ ಇದೆಲ್ಲ ಸರಿ. ಆದರೆ ಇವರೆಲ್ಲರೂ ಮನುಷ್ಯರೆ ! ಇವರು ವರ್ತಿಸುವುದು ತಮ್ಮಂಥ ಮನುಷ್ಯರೊಡನೆಯೇ. ಆದುದರಿಂದ ಅವರ ಸಂಬಂಧ ಮಾನವೀಯವಾದುದು. ಮಾನವೀಯ ಸಂಬಂಧ ಸೌಜನ್ಯವನ್ನು ಅಪೇಕ್ಷಿಸುತ್ತದೆ. ಸೌಜನ್ಯ ಹೂವು ಅರಳಿದಂತೆ ಅರಳಬೇಕು. ಆಗ ಅದರ ಮಹತ್ವ ಹೆಚ್ಚಿನದು. ಬಳಿಗೆ ಬಂದವರು ಏನು ಹೇಳುತ್ತಾರೆ ಎಂಬುದನ್ನು ಕೇಳುವ ತಾಳ್ಮೆ ಬೇಕು; ಆಗುತ್ತದೋ ಇಲ್ಲವೋ ಎಂಬುದನ್ನು ಹೇಳುವಾಗ ಮೃದುವಾಗಿರಲಿ ಮಾತು, ಇದೇ ಸೌಜನ್ಯ.

ಸಹಾನುಭೂತಿ, ಸಹೃದಯತೆ, ಸಮಾಧಾನ ಸೌಜನ್ಯಶೀಲರ ಲಕ್ಷಣ. ಒಂದು ಮಾತು, ಒಂದು ನಗು ಬಳಿಗೆ ಬಂದವರಿಗೆ ತೃಪ್ತಿ ನೀಡುತ್ತದೆ. ಮೊದಲು ಇಷ್ಟಾದರೆ ಸಾಕು. ಆಮೇಲೆ ಉಳಿದುದೆಲ್ಲ. 'ಸತ್ಯವನ್ನು ಹೇಳು, ಹೇಳುವ ಸತ್ಯವನ್ನು ಪ್ರೀಯವಾಗಿ ಹೇಳು' ಎನ್ನುವುದರಲ್ಲಿ ನಮ್ಮ ಹಿರಿಯರು ನಮಗೆ ಸೌಜನ್ಯದ ಗೆರೆಯನ್ನು ಕಾಣಿಸಿದ್ದಾರೆ. 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂಬ ಮಾತಿನಲ್ಲಿ ಸೌಜನ್ಯದ ಸ್ವರೂಪ ವ್ಯಕ್ತವಾಗುತ್ತದೆ.

ಪ್ರಶ್ನೆಗಳು :

(ಅ) ಯಾವ ಯಾವ ಸಂದರ್ಭದಲ್ಲಿ ಒಬ್ಬರು ಇನ್ನೊಬ್ಬರ ಬಳಿಗೆ ಹೋಗುತ್ತಾರೆ ? 2

(ಆ) ಬಾಳಿನ ಸೂತ್ರ ಯಾವುದು ? 1

(ಇ) ಯಾವುದು ಸೌಜನ್ಯ ? 2

(ಈ) ಸೌಜನ್ಯದ ಸ್ವರೂಪ ಎಲ್ಲಿ ವ್ಯಕ್ತವಾಗುತ್ತದೆ ? 1

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ದೇವರು ರುಜು ಮಾಡಿದನು ;
ರಸವಶನಾಗುತ ಕವಿ ಅದ ನೋಡಿದನು!
ಬಿತ್ತರದಾಗಸ ಹಿನ್ನೆಲೆಯಾಗಿರೆ
ಪರ್ವತದೆತ್ತರ ಸಾಲಾಗೆಸೆದಿರೆ
ಕಿಕ್ಕಿರಿದಡವಿಗಳಂಚಿನ ನಡುವೆ
ಮೆರೆದಿರೆ ಜಲಸುಂದರಿ ತುಂಗೆ

ದೇವರು ರುಜು ಮಾಡಿದನು,
ರಸವಶನಾಗುತ ಕವಿ ಅದ ನೋಡಿದನು!
ನದಿ ಹರಿದಿತ್ತು; ಬನ ನಿಂತಿತ್ತು;
ಬಾನ್ ನೀಲಿಯ ನಗೆ ಬೀರಿತ್ತು.
ನಿರ್ಜನ ದೇಶದ ನೀರವ ಕಾಲಕೆ
ಖಗರವ ಪುಲಕಂ ತೋರಿತ್ತು
ಹೂಬಿಸಿಲಿನ ಮಿರುಗಿರೆ ನಿರಿವೊನಲು
ಮೊರೆದಿರೆ ಬಂಡೆಗಳಲಿ ನೀರ್ತೊದಲು

ರಂಜಿಸೆ ಇಕ್ಕೆಲದಲಿ ಹೊಮ್ಮಳಲು
ಸಿಬ್ಬಲುಗುಡ್ಡೆಯ ಹೊಳೆಯಲಿ ಮೀಯುತ
ಕವಿಮನ ನಾಕದಿ ನೆಲೆಸಿತ್ತು;
ಮಧು ಸೌಂದರ್ಯದ ಮಧುರ ಜಗತ್ತು
ಹೃದಯ ಜಿಹ್ವೆಗೆ ಜೇನಾಗಿತ್ತು !
ದೃಶ್ಯದಿಗಂತದಿನೊಮ್ಮೆಯೆ ಹೊಮ್ಮಿ
ಗಿರಿವನ ಪಟದಾಕಾಶದಲಿ
ತೇಲುತ ಬರಲ್ಕೆ ಬಲಾಕಪಂಕ್ತಿ
ಲೇಖನ ರೇಖಾನ್ಯಾಸದಲಿ,
ಅವಾಙ್ಮಯ ಛಂದಃ ಪ್ರಾಸದಲಿ,
ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು;
ರಸವಶನಾಗುತ ಕವಿ ಅದ ನೋಡಿದನು !

**ಪ್ರಶ್ನೆಗಳು :**

(ಅ) ಜಲಸುಂದರಿ ತುಂಗೆ ಹೇಗೆ ಕಂಗೊಳಿಸುತ್ತಿದ್ದಳು ? **2**

(ಆ) ಆಕಾಶವು ಎಂತಹ ನಗೆ ಬೀರಿತ್ತು ? **1**

(ಇ) ಸಿಬ್ಬಲು ಗುಡ್ಡೆಯ ಹೊಳೆ ಹೇಗಿತ್ತು ? **2**

(ಈ) ದೇವರು ಯಾವ ನೆಪದಲಿ ರುಜು ಮಾಡಿದನು ? **1**

## ವಿಭಾಗ – B

**(ಬರವಣಿಗೆ ಕೌಶಲ) : 15 ಅಂಕಗಳು**

II. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು **150** ಪದಗಳಿಗೆ ಮೀರದಂತೆ ನಿಬಂಧವನ್ನು ಬರೆಯಿರಿ. **6**

(ಅ) ವಾಹನ ದಟ್ಟಣೆ

(ಆ) ಇಂದಿನ ಶಿಕ್ಷಣದಲ್ಲಿ ಚಟುವಟಿಕೆಗಳ ಪಾತ್ರ

(ಇ) ಸಾವಯವ ಬೇಸಾಯದ ಪ್ರಾಮುಖ್ಯತೆ

III. ನಿಮ್ಮ ನಗರದ ಮುಖ್ಯ ರಸ್ತೆಯ ಎರಡೂ ಬದಿಗಳ ಪಾದಚಾರಿ ಮಾರ್ಗದಲ್ಲಿ ಅನಧಿಕೃತ ಅಂಗಡಿಗಳೆದ್ದು ಸಂಚಾರಕ್ಕೆ ಅಡ್ಡಿಯುಂಟಾಗಿರುವುದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ತಿಳಿಸಿ, ತೆರವುಗೊಳಿಸಲು ವಿನಂತಿಸಿಕೊಂಡು ಪತ್ರವನ್ನು ಬರೆಯಿರಿ. **5**

**ಅಥವಾ**

ದಿನಾಂಕ 20-2-2018 ರ ವಿಜಯವಾಣಿ ದಿನಪತ್ರಿಕೆಯ ಜಾಹೀರಾತಿನ ಮೇರೆಗೆ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಖಾಲಿ ಇರುವ ಉದ್ಘೋಷಕ ಹುದ್ದೆಗೆ ಅರ್ಜಿಯನ್ನು ಬರೆಯಿರಿ.

IV. ನಿಮ್ಮ ಶಾಲೆಯಲ್ಲಿ 2-10-2017 ರಂದು ನಡೆದ ಗಾಂಧೀಜಿ ಪ್ರತಿಮೆ ಅನಾವರಣ ಸಮಾರಂಭದ ವರದಿಯನ್ನು ತಯಾರಿಸಿ. **4**

## ವಿಭಾಗ – C

## (ಅನ್ವಯಿಕ ವ್ಯಾಕರಣ) : 18 ಅಂಕಗಳು

V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರವನ್ನು ಬರೆಯಿರಿ :

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ : **2**

   (i) ಪ್ರತ್ಯೇಕ (ii) ಮಹೋನ್ನತ

2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ : **2**

   (i) ಆ ಕಲ್ಲು (ii) ಕರಿತುರಗರಥ

3. ಕೆಳಗಿನ ಪದಗಳಿಗೆ ತತ್ಸಮ / ತದ್ಭವ ರೂಪಗಳನ್ನು ಬರೆಯಿರಿ : **1**

   (i) ಪಟ್ಟಣ (ii) ಬಿನ್ನಹ

4. ಕೆಳಗಿನ ಪದಗಳ ವಿಭಕ್ತಿ ಪ್ರತ್ಯಯ ಬರೆಯಿರಿ : **1**

   (i) ಬೆಟ್ಟವನ್ನು (ii) ಸಾವಿತ್ರಿಯ

5. ಕೆಳಗಿನ ಪದಗಳಿಗೆ ಜೋಡು ನುಡಿಯನ್ನು ಬರೆಯಿರಿ : **1**

   (i) ಅಡ್ಡಿ (ii) ಹೊಗಳು

6. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : **1**

   (i) ದಕ್ಷತೆ (ii) ಆಯಾಸ

7. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : **1**

   (i) ದೂಷಣೆ (ii) ಉರ್ವಿ

8. ಕೆಳಗಿನ ಪದಗಳಲ್ಲಿನ ಧಾತುಗಳನ್ನು ಗುರುತಿಸಿ ಬರೆಯಿರಿ : **1**

(i) ಕಟ್ಟುವುದು (ii) ತಿಂದನು

9. ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ : **1**

ನಾನು ಸುಂದರವಾದ ಚಿತ್ರವನ್ನು ಬಿಡಿಸಿದೆ

10. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ : **1**

(i) ಊರು : ರೂಢನಾಮ :: ವಿಜ್ಞಾನಿ ________

(ii) ಮೂಡಣ : ದಿಗ್ವಾಚಕ :: ಅಷ್ಟು ________

11. ಕೆಳಗಿನ ವಾಕ್ಯವನ್ನು ವಿಧ್ಯರ್ಥಕ ರೂಪಕ್ಕೆ ಪರಿವರ್ತಿಸಿ : **1**

ಅವಳು ಹೆಜ್ಜೆ ಹಾಕಿದಲ್ಲಿ ಹೊನ್ನು ಬೆಳೆಯದು.

12. ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ : **1**

ಭೀಮನು ಬಲಗಾಲಿನಿಂದ ಚೆಂಡನ್ನು ಒದೆದನು.

13. ಕೆಳಗಿನ ಪದ / ಪಡೆನುಡಿಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿ ಬರೆಯಿರಿ : **2**

(i) ವಲಸೆ (ii) ಕೈಹಾಕು

14. ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ವಿವರಿಸಿ : **2**

(i) ಆಕಳು ಕಪ್ಪಾದರೆ ಹಾಲು ಕಪ್ಪೇ ?

(ii) ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

## ವಿಭಾಗ – D

**(ಪಠ್ಯಗಳ ಅಧ್ಯಯನ) : 35 ಅಂಕಗಳು**

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : **1 × 10 = 10**

1. ಅಂದಿನ ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದವರು :

   (i) ಜೇಮ್ಸ್ ಬರ್ಕ್ಲಿ (ii) ಬಿ.ಎಲ್. ರೈಸ್

   (iii) ಲಾರ್ಡ್ ಸಂಡ್ ಹರ್ಸ್ಟ್ (iv) ಲಾರ್ಡ್ ವೆಲ್ಲೆಸ್ಲಿ

2. ವಿಶ್ವೇಶ್ವರಯ್ಯನವರು ಈ ನಗರವನ್ನು ಭಾರತದ ಸಯೋಜಿತ ನಗರಗಳ ಸಾಲಿಗೆ ಸೇರ್ಪಡೆ-ಯಾಗುವಂತೆ ಮಾಡಿದರು :

   (i) ಹೈದರಾಬಾದ್ (ii) ಸಿಕಂದರಾಬಾದ್

   (iii) ಮುಂಬೈ (iv) ಮೈಸೂರು

3. ಇದು ಷೇಕ್ಸ್‌ಪಿಯರ್ ಅವರ ಪ್ರಸಿದ್ಧ ದುರಂತ ನಾಟಕ :

   (i) ವಾರ್ ಆ್ಯಂಡ್ ಪೀಸ್ (ii) ಸೀಕ್ರೆಟ್ ಟನಲ್

   (iii) ಹ್ಯಾಮ್ಲೆಟ್ (iv) ದಿ ಮೋಸ್ಟ್ ವಾಂಟೆಡ್ ಮ್ಯಾನ್

4. ಧರ್ಮಬುದ್ಧಿಯು ವಾಸವಿದ್ದುದು ಈ ನಗರದಲ್ಲಿ :

   (i) ದೇವನಗರಿ (ii) ಕಾಶೀ

   (iii) ಧರ್ಮಪುರಿ (iv) ಮಧುರ

5. ‘ಸ್ವಧರ್ಮೇ ನಿಧನಂ ಶ್ರೇಯ’ – ಎಂದು ಈ ಗ್ರಂಥದಲ್ಲಿ ಹೇಳಿದೆ :

(i) ಮಹಾಭಾರತದಲ್ಲಿ (ii) ಋಗ್ವೇದದಲ್ಲಿ

(iii) ಭಗವದ್ಗೀತೆಯಲ್ಲಿ (iv) ರಾಮಾಯಣದಲ್ಲಿ

6. ಕಲುಷಿತವಾಗಿರುವ ನದೀಜಲಗಳಿಗೆ ಈ ಮಳೆಯಾಗಬೇಕೆಂದು ಕವಿ ಹೇಳಿದ್ದಾರೆ :

(i) ಜಡಿಮಳೆ (ii) ಕಾರ್ಮೋಡದ

(iii) ಹಿಂಗಾರಿನ (iv) ಮುಂಗಾರಿನ

7. ಧರ್ಮರಾಯನ ಈ ಅರಮನೆಯಲ್ಲಿ ಕೌರವನು ಅವಮಾನಿತನಾದ :

(i) ವಿಶ್ವಕರ್ಮ ನಿರ್ಮಿತ (ii) ಮಯ ನಿರ್ಮಿತ

(iii) ದೇವ ನಿರ್ಮಿತ (iv) ವಿದುರ ನಿರ್ಮಿತ

8. ಮುನಿಸುತರು ಹೆದರಲು ಕಾರಣ :

(i) ಓಡಿಸುವರೆಂದು (ii) ಬಡಿಯುವರೆಂದು

(iii) ಶಿಕ್ಷಿಸುವರೆಂದು (iv) ಎಳೆದೊಯ್ವರೆಂದು

9. ಜಲಾಧಿಪತಿ ಎಂದು ಪ್ರಸಿದ್ಧರಾದವರು :

(i) ವರುಣ (ii) ಕುಬೇರ

(iii) ವಾಯು (iv) ಕಿಂಪುರುಷ

10. ಒಡಲು ಅನುಭವಿಸುವ …………… ಕೆ ಗಡಿಯೂ ಇಲ್ಲ :

(i) ಸಂಕಟ (ii) ಆನಂದ

(iii) ಉತ್ಸಾಹ (iv) ಕೋಪ

VII. ಈ ಕೆಳಗಿನ ಪ್ರಶ್ನೆಗಳಿಗೆ **5 - 6** ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ : **3 × 4 = 12**

1. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ.

   ಮಾಹಿತಿಯಲ್ಲಾಗಲಿ ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ.

   **ಅಥವಾ**

   "ಹುಸಿಯದ ಬೇಹಾರಿಯೇ ಇಲ್ಲ"

2. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ವಿವರಿಸಿ.

3. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ.

   "ಜಾನಕಿಯ ಮಗನಿದಕೆ ಬೆದರುವನೆ"

   **ಅಥವಾ**

   "ಜೀಯ ಹಸಾದವೆಂಬುದು ಕಷ್ಟ"

4. ಮಾನವನ ಸರ್ವಾಧಿಕಾರಿ ಗುಣವನ್ನು ಕವಯತ್ರಿ ದು. ಸರಸ್ವತಿ ಅವರು ಹೇಗೆ ವಿವರಿಸಿದ್ದಾರೆ ?

VIII. ಕೆಳಗಿನ ಪ್ರಶ್ನೆಗಳಿಗೆ **7 - 8** ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ. **4 × 2 = 8**

1. ಕವಿ ಸಿದ್ಧಲಿಂಗಯ್ಯ ಹೇಳಿದ ಕಥೆಯನ್ನು ಬರೆಯಿರಿ.

   **ಅಥವಾ**

   ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ವಿವರಿಸಿ.

2. ನಾವು ಯಾವ ಸಂಕಲ್ಪ ಕೈಕೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶಯ.

   **ಅಥವಾ**

   ಕರ್ಣನ ನಿರ್ಧಾರ ಸರಿ ಎನ್ನುವಿರಾ ? ಏಕೆ ? ವಿವರಿಸಿ.

**(ಪಠ್ಯ ಪೋಷಕ ಅಧ್ಯಯನ) : 5 ಅಂಕಗಳು**

IX. ಈ ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ. **1 × 5 = 5**

1. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಲೇಖಕರು ಹೇಳಿದ್ದಾರೆ ?

2. ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ ?

3. ಕ್ರಿಯಾ ಸ್ವಾತಂತ್ರ್ಯ ಎಂದರೇನು ?

4. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?

5. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ ?